Karnatak University's
# KARNATAK SCIENCE COLLEGE, DHARWAD
*Accredited "B" Grade*
**Phone No: 0836-2441146 &2215400 Fax: 0836-2744334**
**Email:** principal.kscd@gmail.com **Web:** www.kcd.ac.in

Ref No: KSCD/UG-EXAM/2024-2025/ Date: 07.06.2024

## ವಿದ್ಯಾರ್ಥಿಗಳ ಗಮನಕ್ಕೆ

ಬಿ. ಎಸ್ಸ್ ಸಿ/ಬಿ.ಸಿ.ಎ 2, 4 ಮತ್ತು 6ನೇ ಸೆಮೆಸ್ಟರನ ವಿದ್ಯಾರ್ಥಿಗಳಿಗೆ ತಿಳಿಸುವದೇನಂದರೆ, ಜುಲೈ/ಆಗಸ್ಟ್ 2024 ರಲ್ಲಿ ಜರುಗುವ ಪರೀಕ್ಷೆಗಳಿಗೆ UUCMS ತಂತ್ರಾಂಶದ ಮೂಲಕ ಪರೀಕ್ಷಾ ಫಾರ್ಮ/ಶುಲ್ಕಗಳನ್ನು ತುಂಬುವದಕ್ಕಿಂತ ಮೊದಲು ಈ ಕೆಳಗಿನ ವಿವರವಾದ ಸೂಚನೆಗಳನ್ನು ತಪ್ಪದೇ ಪಾಲಿಸಲು ಸೂಚಿಸಲಾಗಿದೆ.

1) ಪಿ.ಯು.ಸಿ ಅಂಕ ಪಟ್ಟಿಗಳಲ್ಲಿರುವಂತೆ ವಿದ್ಯಾರ್ಥಿಯ ಹೆಸರು, ತಂದೆ ಹೆಸರು ಮತ್ತು ಅಡ್ಡ ಹೆಸರು ಸರಿಯಾಗಿ ಇರುವದನ್ನು ಗಮನಿಸಬೇಕು.
2) ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ತುಂಬುವದಕ್ಕಿಂತ ಮುಂಚೆ ಈ ಕೆಳಗೆ ಉದಾಹರಣೆಯಲ್ಲಿ ವಿವರಿಸಿದಂತೆ ವಿಷಯಗಳ ಮಾಹಿತಿಯು ಸರಿಯಾಗಿ ಇರುವದನ್ನು ಖಚಿತಪಡಿಸಿಕೊಳ್ಳಬೇಕು.

**ಉದಾಹರಣೆಗೆ:**

| QP Code | Scheme | Term/ Semester | Course Code | Course/Paper Title |
|---|---|---|---|---|
| 032GEG011 | NEP-2020 | II | 032GEG011 | BASICS OF CRYSTALLOGRAPHY, MINERALOGY AND PETROLOGY |

3) ಒಂದು ವೇಳೆ Course Code, Course/Paper Title ನಲ್ಲಿ ವ್ಯತ್ಯಾಸವಿದ್ದರೆ ಕೂಡಲೆ UUCMS Nodal Officer ಇವರನ್ನು ಸಂಪರ್ಕಿಸಿ ವ್ಯತ್ಯಾಸವನ್ನು ಸರಿಪಡಿಸಿಕೊಂಡ ನಂತರವಷ್ಟೇ ಪರೀಕ್ಷಾ ಅರ್ಜಿಫಾರ್ಮಗಳನ್ನು ತುಂಬಬೇಕು.
4) ದಿನಾಂಕ 04.06.2024 ರಿಂದ 18.06.2024 ರ ವರೆಗೆ ದಂಡವಿಲ್ಲದೆ ಪರೀಕ್ಷಾ ಶುಲ್ಕವನ್ನು ಭರಿಸಿ ಅರ್ಜಿ ಫಾರ್ಮಗಳನ್ನು ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.
5) ದಿನಾಂಕ 19.06.2024 ರಿಂದ 20.06.2024 ರ ವರೆಗೆ ರೂ. 180/–ದಂಡದೊಂದಿಗೆ ಪರೀಕ್ಷಾ ಶುಲ್ಕವನ್ನು ಭರಿಸಿ ಅರ್ಜಿ ಫಾರ್ಮಗಳನ್ನು ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.
6) ದಿನಾಂಕ 21.06.2024 ರಿಂದ 22.06.2024 ರ ವರೆಗೆ ರೂ. 200/–ದಂಡದೊಂದಿಗೆ ಪರೀಕ್ಷಾ ಶುಲ್ಕವನ್ನು ಭರಿಸಿ ಅರ್ಜಿ ಫಾರ್ಮಗಳನ್ನು ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.
7) ಎಲ್ಲ ವಿದ್ಯಾರ್ಥಿಗಳ UUCMS ತಂತ್ರಾಂಶದ ಮೂಲಕ ಸಲ್ಲಿಸಿದ ಪರೀಕ್ಷಾ ಫಾರ್ಮ ಹಾಗೂ ಶುಲ್ಕದ ವಿವರಗಳನ್ನು ಪರಿಶಿಲಿಸಿ ಸಮಗ್ರ ಯಾದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ 24.06.2024 ಇರುತ್ತದೆ.

ಆದುದರಿಂದ, ಎಲ್ಲ ವಿದ್ಯಾರ್ಥಿಗಳು UUCMS ತಂತ್ರಾಂಶದ ಮುಖಾಂತರ ಭರ್ತಿ ಮಾಡಿದ ಪರೀಕ್ಷಾ ಫಾರ್ಮ ಹಾಗೂ ಶುಲ್ಕದ ವಿವರಗಳೊಂದಿಗೆ ಅಗತ್ಯ ದಾಖಲೆಗಳನ್ನು ಲಗತ್ತಿಸಿ ನಿಗದಿಪಡಿಸಿದ ಕೊನೆಯ ದಿನಾಂಕಿನ ಒಳಗೆ ಕಡ್ಡಾಯವಾಗಿ (Hard Copy) ಮುದ್ರಿತ ಪ್ರತಿಯನ್ನು ಮಹಾವಿದ್ಯಾಲಯದ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಈ ಹಿಂದೆ ಕೆಲವೊಂದು ವಿದ್ಯಾರ್ಥಿಗಳು ಅನಗತ್ಯವಾಗಿ ಅರ್ಜಿ ಫಾರ್ಮಗಳನ್ನು ತಡವಾಗಿ ಸಲ್ಲಿಸುವದು ಕಂಡುಬಂದಿರುತ್ತದೆ. ಇದರಿಂದಾಗಿ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಸಮಗ್ರವಾದ ಯಾದಿಯನ್ನು ಸಲ್ಲಿಸುವದು ವಿಳಂಬವಾಗುತ್ತಿದೆ. ಕಾರಣ, ವಿದ್ಯಾರ್ಥಿಗಳು ವಿನಾಕಾರಣ ಮೇಲೆ ತಿಳಿಸಿದ ಕೊನೆಯ ದಿನಾಂಕಿನೊಳಗೆ ಅರ್ಜಿಗಳನ್ನು ಸಲ್ಲಿಸದಿದ್ದರೆ ದಿನಒಂದಕ್ಕೆ ರೂ. 50/– ರಂತೆ ಹೆಚ್ಚುವರಿಯಾಗಿ ದಂಡವನ್ನು ವಿಧಿಸಲಾಗುವದು. **ಮುಖ್ಯವಾಗಿ ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು UUCMS ತಂತ್ರಾಂಶದಲ್ಲಿ ಅನುಮೋದನೆ ಮಾಡಲಾಗುವದಿಲ್ಲ.**

ಮುಂದುವರೆದು, 6 ನೇ ಸೆಮೆಸ್ಟರನ ವಿದ್ಯಾರ್ಥಿಗಳು 2 ಮತ್ತು 4ನೇ ಸೆಮೆಸ್ಟರಗಳಲ್ಲಿ ಬ್ಯಾಕ್ ಲಾಗ್ ಪೇಪರಗಳು ಬಾಕಿ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು 6 ನೇ ಸೆಮೆಸ್ಟರನ ಪರೀಕ್ಷಾ ಅರ್ಜಿ/ಶುಲ್ಕ ತುಂಬುವಾಗ ಬ್ಯಾಕಲಾಗ್ ಪೇಪರಗಳ ಪರೀಕ್ಷಾ ಶುಲ್ಕವು ತಾಂತ್ರಿಕ ಕಾರಣಗಳಿಂದ UUCMS ತಂತ್ರಾಂಶದಲ್ಲಿ ಪೂರ್ಣ ಪ್ರಮಾಣದಲ್ಲಿ ಸೇರ್ಪಡೆಯಾಗಿರುವದಿಲ್ಲ. ಕಾರಣ, ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದ ವ್ಯತ್ಯಾಸದ ಮೊತ್ತವನ್ನು ಚಲನ್ ಮುಖಾಂತರ ಭರಿಸಲು ಸೂಚಿಸಲಾಗಿದೆ.

ಪರೀಕ್ಷಾ ಶುಲ್ಕದ ಜೊತೆಗೆ, ಪ್ರತಿ ವಿದ್ಯಾರ್ಥಿಯು ರೂ.100/- ನ್ನು ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಯ ಸಂಸ್ಕರಣೆ (Processing) ಶುಲ್ಕವನ್ನು (ಪ್ರತಿ ಸೆಮೆಸ್ಟರಗೆ), ರೂ.145/-ನ್ನು ಅಂಕಪಟ್ಟಿ ಶುಲ್ಕ ಪಾವತಿಸಬೇಕಾಗುತ್ತದೆ.

ಸಂಬಂಧಪಟ್ಟ ಕೋರ್ಸುಗಳ ವಿದ್ಯಾರ್ಥಿಗಳು ಪ್ರೋಜೆಕ್ಟ್ / ಫೀಲ್ಡ್ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ ರೂ.535/- ಗಳನ್ನು ಹಾಗೂ ರಿಪೀಟರ್ಸ್ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯ ಪ್ರಕ್ರಿಯೆ ಶುಲ್ಕ ರೂ.100/- ಗಳು ಕಾರಣಾಂತರಗಳಿಂದ UUCMS ತಂತ್ರಾಂಶದಲ್ಲಿ ಸೇರ್ಪಡೆಯಾಗಿರುವವುದಿಲ್ಲ. ಕಾರಣ, ಅಂತಹ ವಿದ್ಯಾರ್ಥಿಗಳು ಚಲನ್ ಮುಖಾಂತರ ಶುಲ್ಕವನ್ನು ಭರಿಸಲು ಸೂಚಿಸಲಾಗಿದೆ.

**"UUCMS ತಂತ್ರಾಂಶದ ಮೂಲಕ ವಿದ್ಯಾರ್ಥಿಗಳು ಸಲ್ಲಿಸಿದ ಪರೀಕ್ಷಾ ಅರ್ಜಿಗಳು ಈ ಮುಂದಿನ ಷರುತ್ತುಗಳಿಗೆ ಒಳಪಟ್ಟಿರುತ್ತದೆ. ಪ್ರತಿ ಸೆಮೆಸ್ಟರ ಪ್ರತಿ ವಿಷಯದಲ್ಲೂ ಕನಿಷ್ಠ 75% ಹಾಜರಾತಿಯನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ನಮೂನೆಗಳನ್ನು ರದ್ದುಪಡಿಸುವ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಮಹಾವಿದ್ಯಾಲಯದ ಪ್ರಾಚಾರ್ಯರ ಕೋರಿಕೆಯ ಮೇರೆಗೆ ಅಂತಹ ವಿದ್ಯಾರ್ಥಿಗಳ ಪರೀಕ್ಷೆಯ ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ) ಫ್ರೀಜ್/ತಡೆಹಿಡಿಯಲಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಅಂತರ್ಜಾಲದಲ್ಲಿ ಭರ್ತಿ ಮಾಡಿದ ಪರೀಕ್ಷಾ ಅರ್ಜಿಯ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ನೀಡುವುದಿಲ್ಲ. ಯು.ಜಿ.ಸಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಕಡ್ಡಾಯವಾಗಿ 75% ರಷ್ಟು ಹಾಜರಾತಿಯನ್ನು ಪೂರೈಸಿರಬೇಕು."**

**Academic Dean**
**K. Sc College, Dharwad**